ಟಿಪ್ಪಣಿ ಹಾಳೆ

ವಿಷಯ.....

..... ಪುಟದ ಸಂಖ್ಯೆ .....

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ,

ವಿಷಯ: Improvements to roads drains and other developmental works in ward no -02 & 03 under road development head in Chief Minister Nava Nagarothan grants of yelahanka division. (Package No-01)

ಉಲ್ಲೇಖ:

1. ಕಾರ್ಯಾದೇಶ ಸಂಖ್ಯೆ: EE(YNK D)E-PMT-12/W O/ 263 /2019-20 Dt : 23-03-2020
2. ಗುತ್ತಿಗೆದಾರರ ಮನವಿ ಪತ್ರದ ದಿನಾಂಕ: 23-09-2020.

* * * * *

(1) ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ Improvements to roads drains and other developmental works in ward no -02 & 03 under road development head in Chief Minister Nava Nagarothan grants of yelahanka division. (Package No-01) ಎಂಬ ಕಾಮಗಾರಿಗೆ ಸಂಬಂದಿಸಿದಂತೆ ಮೇಲಿನ ಉಲ್ಲೇಖದ ಪತ್ರ (1)ರಲ್ಲಿ ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗರವರು ಕಾಮಗಾರಿಯನ್ನು ನಿರ್ವಹಿಸಲು ಗುತ್ತಿಗೆಧಾರರಾದ ಶ್ರೀ.ಆರ್.ಸತೀಶ್ (ಸತ್ಯ ಕನ್ಸ್ಟ್ರಕ್ಷನ್ಸ್) ರವರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಹಾಗೂ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು 180 ದಿನಗಳನ್ನು ನಿಗಧಿಪಡಿಸಿರುತ್ತಾರೆ.

(2) ಮುಂದುವರೆದು ಸದರಿ ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ಕೋವಿಡ್ -19 ರ ಹಿನ್ನಲೆಯಲ್ಲಿ ಮಾರ್ಚ್ -20 ರಿಂದ ಮಾಡಲಾದ ಲಾಕ್ಡೌನ್ ನಿಂದ ಕೂಲಿ ಕಾರ್ಮಿಕರು ಲಭ್ಯವಿಲ್ಲದೇ ಇರುವುದರಿಂದ ಸರಕುಗಳು ಮತ್ತು ಸೇವೆಗಳ ಸರಬರಾಜು ವ್ಯವಸ್ಥೆಯು ಸ್ಥಗಿತಗೊಂಡಿರುವುದರಿಂದ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸುಮಾರು 4 ತಿಂಗಳ ಕಾಲಾವಧಿ ನೀಡಬೇಕೆಂದು ಉಲ್ಲೇಖ ಪತ್ರದಲ್ಲಿ ಗುತ್ತಿಗೆದಾರರು ಕೋರಿರುತ್ತಾರೆ. ಅದರಂತೆ ಹಾಗೂ ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರು ಸದರಿ ಲಾಕ್ಡೌನ್ ಸಮಯದಲ್ಲಿ ಸಿವಿಲ್ ಕಾಮಗಾರಿಗಳನ್ನು ನಿರ್ವಹಿಸಿ ಪೂರ್ಣಗೊಳಿಸಲು ಕನಿಷ್ಠ 3 ತಿಂಗಳು ಹಾಗೂ ಗರಿಷ್ಠ 6 ತಿಂಗಳ ಅವಧಿ ರಿಯಾಯಿತಿ ನೀಡಿ ಆದೇಶ ಹೊರಡಿಸಿರುತ್ತಾರೆ. ಆದುದರಿಂದ ಗುತ್ತಿಗೆದಾರರು ಸದರ ಕಾಮಗಾರಿಯನ್ನು ಪೂರ್ಣಗೊಳಿಸಲು ಸುಮಾರು 4 ತಿಂಗಳ ಕಾಲಾವಧಿ ನೀಡಲು ಕೋರಿರುವುದರಿಂದ ಗುತ್ತಿಗೆದಾರರಿಗೆ ದಂಡ ರಹಿತ ಕಾಲಾವಿಸ್ತರಣೆ ನೀಡಲು ಅನುಮೋದನೆಗಾಗಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ.

(3) ಸ.ಕಾ.ಅ.ಇ ಯಹ.ಉ.ವಿ

AE-02

4) EE/YLK/Dm :—

Asst. Executive Engineer
Yelahanka Sub. Divison
(BBMP Ylk. Zn)
Yelahanka, Bangalore

ಪು.ತಿ.ನೋ

ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ (1) ರಿಂದ (3) ರಲ್ಲಿ ವಿವರಿಸಿರುವಂತೆ ಸಂಪೂರ್ಣದಾರರಾದ
M/s. Sathya Construction ರವರಿಗೆ ಹೆಚ್ಚಿನ ಸಮಯಾವಕಾಶವನ್ನು
ಸಂಪೂರ್ಣ ಕಾಮಗಾರಿಯನ್ನು 120 ದಿನಗಳಲ್ಲಿ ಸಿವಿಲ್ ಕಾಮಗಾರಿಯನ್ನು
ಅವಧಿ ದಿನಾಂಕ 23.03.2020 ರಂದು ಈ ಪತ್ರದೊಂದಿಗೆ
ಸಿವಿಲ್ ಕಾಮಗಾರಿಯನ್ನು ಪೂರ್ಣಗೊಳಿಸಲು ಪೂರಕ ದಿನಾಂಕ
25.03.2020 ರಿಂದ 31.05.2020 ರವರೆಗೆ ಹೆಚ್.ಟಿ-17
ರ ಅನ್ವಯಿಸುವಲ್ಲಿ ಸಾಧ್ಯವಾದಂತೆ Lockdown ಅವಧಿಯಲ್ಲಿ ಇರುವುದರಿಂದ
(05) ಅದರ ಹೆಚ್ಚಿನ ಪ್ರಮಾಣದಲ್ಲಿ ಸಿವಿಲ್ ಕಾಮಗಾರಿಯನ್ನು ಸಂಪೂರ್ಣಗೊಳಿಸಲು
ಸಾಧ್ಯವಾಗುವುದಿಲ್ಲ ಹಾಗೂ Lockdown ಅಂಗವಾಗಿ ಕಛೇರಿ ಹಾಗೂ
ಕೆಲಸ ನಿರ್ವಹಣೆಯ ಸಾಧ್ಯತೆ ಪರಿಸ್ಥಿತಿಯಲ್ಲಿ ಸಂಪೂರ್ಣ ಸಹಕಾರ
ಲಭ್ಯವಿರುವುದಿಲ್ಲ ಹಾಗೂ ಸಂಪೂರ್ಣ ಸಿವಿಲ್ ಕಾಮಗಾರಿಯನ್ನು
ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ. ಪ್ರಯುಕ್ತದಿಂದ ಹೆಚ್ಚಿನ
ಸಿವಿಲ್ ಕಾಮಗಾರಿಯನ್ನು ಪೂರ್ಣಗೊಳಿಸಲು ಹೆಚ್ಚುವರಿಯಾಗಿ 90 ದಿನಗಳ
ಪೂರಕ ಅವಧಿಯನ್ನು ಮಂಜೂರು ಮಾಡಲು ಕೋರಲಾಗಿದೆ.

ಮುಂದುವರೆದು ಹೆಚ್ಚಿನಂತಿರುವ ಕೋರಿಕೆಯ ಹಿನ್ನೆಲೆಯಲ್ಲಿ
ಹಾಗೂ ಹೆಚ್.ಟಿ-17 ರ Lockdown ಅಂಶಗಳಲ್ಲಿ ಇರುವುದರಿಂದ
ಸಿವಿಲ್ ಕಾಮಗಾರಿ ಪೂರ್ಣಗೊಳಿಸುವ ಪೂರಕ ಅವಧಿಯನ್ನು ದಿನಾಂಕ 23-09-2020
(06) ರಿಂದ 23.12.2020 ರವರೆಗೆ (90 ದಿನಗಳ) ಈ ಕೆಳಗಿನ ಷರತ್ತುಗಳಿಗೆ
ಒಳಪಟ್ಟಂತೆ ಹಾಗೂ ಅಂತ್ಯ ಪತ್ರದ ಮುಂದಿನ ಪ್ರಮಾಣಕ್ಕೆ
ಪೂರಕವಾಗಿ ಕೆಳಗಿನಂತೆ

(07) ಮುಖ್ಯ ಪೂರಕ ಷರತ್ತುಗಳು (ಮತ್ತು)

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ
ಬಿ.ಬಿ.ಎಂ.ಪಿ. ಬೆಂಗಳೂರು - 560064

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

KST No. 13018802 Dated 29-8-2002
PAN No. APRPS - 2240G
GSTIN : 29APRPS2240G1ZJ

Mob. : 9341705164

SATHYA CONSTRUCTIONS

For All Typs of Civil Works & Garbage Cleaning

600, Down Bazaar Road, Yelahanka, Bangalore - 560 064.

Email : rsatheesh2009@rediffmail.com

Ref. :

Date : 15/9/2020

ರವರಿಗೆ,

ಕಾರ್ಯಪಾಲಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಯಲಹಂಕ ವಿಭಾಗ, ಯಲಹಂಕ ವಲಯ
ಬೆಂಗಳೂರು–560064

AEE(YNK) (ಸ್ವೀಕರಿಸಿದ ದಿನಾಂಕ) 15/09/2020

ವಿಷಯ : ಕಾಮಗಾರಿಯ ಕಾಲಾವಧಿಯನ್ನು ವಿಸ್ತರಣೆ ಮಾಡುವ ಬಗ್ಗೆ.

ಉಲ್ಲೇಖ:

1. ಕಾರ್ಯಾದೇಶ ಸಂಖ್ಯೆ: EE(YNK.D)E-PMT-12/W.o/263/2019-20
   Date: 23.03.2020

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, Improvements to roads,drains and other developmental work in ward no -02 &03 under road development head in Chief Minister Nava Nagarothan grants of yelahanka division.(Package-01) ಎಂಬ ಕಾಮಗಾರಿಗೆ ಸಂಬಂದಿಸಿದಂತೆ ಮೇಲಿನ ಉಲ್ಲೇಖದ ಪತ್ರ (1) ರಲ್ಲಿ ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗರವರು ಕಾಮಗಾರಿಯನ್ನು ನಿರ್ವಹಿಸುಲು ಗುತ್ತಿಗೆದಾರರಾದ ಶ್ರೀ.ಆರ್.ಸತೀಶ್ (ಮೇ ಸತ್ಯ ಕನ್ಸ್ಟ್ರಕ್ಷನ್ಸ್) ರವರಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ. ಹಾಗೂ ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ದಿನಾಂಕ :23.03.2020 ರಿಂದ 23.09.2020 ವರೆಗೆ ಕಾಲಾವಧಿಯನ್ನು ನೀಡಿರುತ್ತಾರೆ.

ಮುಂದುವರೆದು ಕೋವಿಡ್–19 ಹಿನ್ನೆಲೆಯಲ್ಲಿ 25.03.2020 ರಂದು ಮಾಡಲಾದ ಲಾಕ್ ಡೌನ್ ಮತ್ತು ನಂತರ ಉದ್ಭವಿಸಿದ ಕಾರ್ಮಿಕರು ಹಾಗೂ ಸರಕುಗಳು ಮತ್ತು ಸೇವೆಗಳ ವ್ಯವಸ್ಥೆಯಲ್ಲಿ ತೊಂದರೆಯಾದ ಹಿನ್ನೆಲೆಯಲ್ಲಿ ಕಾಮಗಾರಿಯನ್ನು ಕಾರ್ಯಗತಗೊಳಿಸುವಲ್ಲಿ ವಿಳಂಬವಾಗಿರುವ ಕಾರಣ ಸದರಿ ಕಾಮಗಾರಿಗೆ ಸುಮಾರು 120 ದಿನಗಳು(4 ತಿಂಗಳು) ರವರೆಗೆ ಕಾಲಾವಧಿಯನ್ನು ವಿಸ್ತರಣೆ ಮಾಡುವಂತೆ ಈ ಮೂಲಕ ತಮ್ಮಲ್ಲಿ ಕೋರಿಕೋಳ್ಳುತ್ತೇನೆ.

'ವಂದನೆಗಳೊಂದಿಗೆ'

ಇಂತಿ ತಮ್ಮ ವಿಶ್ವಾಸಿ
For SATHYA CONSTRUCTIONS
Proprietor

ಪ್ರತಿಗಳು

1.ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಯಲಹಂಕ ವಿಭಾಗ, ಯಲಹಂಕ ವಲಯ ಬೆಂಗಳೂರು–560064

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರಧಾನ ಆಯುಕ್ತರು ರವರ ಕಛೇರಿ, ಪಾಲಿಕೆಯ ಮುಖ್ಯ ಕಛೇರಿಗಳು,ನಂ.೨ಂಪಣ್ಣ ಚೌಕ, ಬೆಂಗಳೂರು.

ಸಂಖ್ಯೆ: ಆ/ಮ.ಆರ/೩೨೬೪/20-21 ದಿನಾಂಕ-೦೬-೨೦೨೦

(1) ಮುಖ್ಯ ಆಯುಕ್ತರು
(ಪೂರ್ವ, ಪಶ್ಚಿಮ, ದಕ್ಷಿಣ, ಮಹದೇವಪುರ, ಬೊಮ್ಮನಹಳ್ಳಿ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಯಲಹಂಕ, ರಸ್ತೆ ಮೂಲಭೂತ ಸೌಕರ್ಯ, ಕೆರೆಗಳು, ಯೋಜನೆ-ಕೇಂದ್ರ, ಬೃಹತ್ ನೀರುಗಾಲುವೆ ಮತ್ತು ಜಾಗೃತಕೋಶ)

ಅಂತರಿಕ ಕಛೇರಿ ಜ್ಞಾಪನ

ವಿಷಯ:- ಕರ್ನಾಟಕ ರಾಜ್ಯ ಸರ್ಕಾರ ಹಣಕಾಸು ಇಲಾಖೆ ಕೋವಿಡ್-19 ರ ನಡವಳಿಯಲ್ಲಿ ಗುತ್ತಿಗೆದಾರರಿಗೆ ನೀಡಿರುವ ರಿಯಾಯಿತಿಯನ್ನು ಮಹಾನಗರ ಪಾಲಿಕೆಯಲ್ಲಿ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ:- (1)ಭಾರತ ಸರ್ಕಾರ ಹಣಕಾಸು ಇಲಾಖೆ ರವರು ಹೊರಡಿಸಿರುವ ಕಛೇರಿ ಆದೇಶದ ಸಂಖ್ಯೆ: F18/4/20-20-PPD newdelhi dt:13-05-2020.

(2)ಕರ್ನಾಟಕ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು (ಹಣಕಾಸು ಇಲಾಖೆ) ರವರ ಕಛೇರಿಯ ಪತ್ರದ ಸಂಖ್ಯೆ:ಆಇ360ಪಸ್ತ್ರಿ-12/2020(ಇ-ಆಫೀಸ್) ಬೆಂಗಳೂರು, ದಿ:13-07-20.

(3)ದಿ:22-07-2020 ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ ಮನವಿ ಪತ್ರ

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಉಲ್ಲೇಖ (3) ರ ಅಡಿ ಪಾಲಿಕೆ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಸಲ್ಲಿಸಿದ ಮನವಿಯಂತೆ ಕೋವಿಡ್ -19 ಮಹಾಮಾರಿಯು ಹಿನ್ನೆಲೆಯಲ್ಲಿ ಮಾಡಲಾದ ಲಾಕ್ ಡೌನ್ ಮತ್ತು ನಂತರ ಉದ್ಭವಿಸಿದ ಕಾರಣಗಳಿಂದ ಸರಕುಗಳು ಮತ್ತು ಸೇವೆಗಳ ಸರಬರಾಜು ವ್ಯವಸ್ಥೆಯಲ್ಲಿ ತೊಂದರೆಯಾದ ಹಿನ್ನೆಲೆಯಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ಮತ್ತು ಸಾಮಗ್ರಿಗಳ ಸರಬರಾಜಿನಲ್ಲಿ ವಿಳಂಬವಾಗಿರುವ ಅವಧಿಯನ್ನು (FORCE MAJEURE) ಆಗಿ ಪರಿಗಣಿಸುವುದನ್ನು ಸೇರಿದಂತೆ ಹಲವು ಸಡಿಲಿಕೆಗಳನ್ನು ನೀಡುವಂತೆ ಕೋರಲಾಗಿರುತ್ತದೆ.

ಮೇಲ್ಕಂಡ ಉಲ್ಲೇಖ (1 ಮತ್ತು 2) ರಲ್ಲಿ ಭಾರತ ಸರ್ಕಾರ / ಕರ್ನಾಟಕ ಸರ್ಕಾರದ ಹಣಕಾಸು ಇಲಾಖೆಯಿಂದ ನೀಡಲಾದ ಸಡಿಲಿಕೆ / ರಿಯಾಯಿತಿಗಳನ್ನು ಪರಿಶೀಲಿಸಿ ಕೋವಿಡ್ -19 ಮಹಾಮಾರಿಯ ಪರಿಣಾಮದಿಂದಾಗಿ ಸರಕು ಸರಬರಾಜು ಮತ್ತು ಸಿವಿಲ್ ಕಾಮಗಾರಿಗಳ ಗುತ್ತಿಗೆಗಳ ಸಂಬಂಧದಲ್ಲಿ ಈ ಕೆಳಗಿನಂತೆ ನಿರ್ದಿಷ್ಟ ಅವಧಿಗೆ ತಾತ್ಕಾಲಿಕವಾಗಿ ಗುತ್ತಿಗೆ ಒಪ್ಪಂದದಲ್ಲಿ ಬದಲಾವಣೆಗಳನ್ನು ಅಳವಡಿಸಿಕೊಳ್ಳಲು ಸಂಗ್ರಾಯಣ ಪ್ರಾಧಿಕಾರಿಗಳಿಗೆ ಆದೇಶಿಸಿದೆ.

(1) ಅವಧಿ ವಿಸ್ತರಣೆ:-

a) ರಾಜ್ಯದಲ್ಲಿ ದಿ:20-02-2020 ಮತ್ತು ಅದರ ನಂತರ ಗುತ್ತಿಗೆ ಹೊಣೆಗಾರಿಕೆ ಮುಕ್ತಾಯವಾಗಬೇಕಾದ ಸರಕು ಮತ್ತು ಸೇವೆಗಳು ಹಾಗೂ ಸೇವೆಗಳು ಹಾಗೂ ಸಿವಿಲ್ ಕಾಮಗಾರಿಗಳ ಒಪ್ಪಂದಗಳ ಸಂಬಂಧದಲ್ಲಿ ಈ ಕುರಿತಾಗಿ ನಿಯಮಾನುಸಾರ ಸಂಬಂಧಪಟ್ಟ ಎಲ್ಲಾ ಪಕ್ಷಗಾರರು (parties) ಅಗತ್ಯ ಪ್ರಕ್ರಿಯೆಯನ್ನು ಪೂರೈಸುವ ದೃಷ್ಟಿಗೆ ಒಳಪಟ್ಟು ಕನಿಷ್ಠ 03 ತಿಂಗಳು ಹಾಗೂ ಗರಿಷ್ಠ 06 ತಿಂಗಳವರೆಗಿನ ಅವಧಿಯನ್ನು ಮಾದರಿ ಟೆಂಡರ್ ದಾಖಲೆಗಳಲ್ಲಿನ ಕ್ಲಾಸ್‌ಗಳಿಗೆ ಅನುಗುಣವಾಗಿ Employees risk ಆದಿ compensation event ಆಗಿ ಪರಿಗಣಿಸಲು ಹಾಗೂ ಉಳಿದಂತೆ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಅಥವಾ ಯೋಜನೆಗಳಡಿ ಮಾಡಿಕೊಳ್ಳಲಾದ ಒಪ್ಪಂದಗಳು ಮತ್ತು ಪಿ.ಪಿ.ಪಿ.ಗುತ್ತಿಗೆ ಒಪ್ಪಂದಗಳ ಸಂಬಂಧದಲ್ಲಿ FORCE MAJEURE ಅವಧಿಯಾಗಿ ಪರಿಗಣಿಸಿ ಗುತ್ತಿಗೆದಾರರಿಗೆ / ರಿಯಾಯಿತಿದಾರರಿಗೆ / ಸರಬರಾಜುದಾರರಿಗೆ ಯಾವುದೇ ದಂಡ ಅಥವಾ ದಂಡವಿಲ್ಲದೇ ಅವಧಿ ವಿಸ್ತರಣೆ ಮಾಡಲು ತಿಳಿಸಿದೆ.

b) ಈ ರೀತಿ ವಿಸ್ತರಣೆ ಮಾಡಬೇಕಾದ ಅವಧಿ (ಕನಿಷ್ಠ 03 ತಿಂಗಳು ಹಾಗೂ ಗರಿಷ್ಠ 06 ತಿಂಗಳ ಮಿತಿ) ಯನ್ನು ಆಯಾ ಸದರಿ / ಸೇವೆಯ ಸರಬರಾಜು ಮತ್ತು ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿನ ಪರಿಸ್ಥಿತಿಗಳನ್ವಯಿಸಿ ಆಯಾ ಸಂಗ್ರಹಣಾ ಪ್ರಾಧಿಕಾರಗಳು ನಿರ್ಧರಿಸತಕ್ಕದ್ದು.

c) ದಿ:19-02-2020ರಂದು ಸಂಬಂಧಪಟ್ಟ ಯಾವುದೇ ಪಕ್ಷಗಾರರು (parties) ಗುತ್ತಿಗೆ ಒಪ್ಪಂದದ ಕಾರ್ಯವನ್ನು ನಿರ್ವಹಿಸುವಲ್ಲಿ ವಿಫಲ (default) ವಾಗಿದ್ದ ಪಕ್ಷದಲ್ಲಿ ಮಾತ್ರ ಸದರಿ ಅವಧಿ ವಿಸ್ತರಣೆಯು ಅನ್ವಯವಾಗತಕ್ಕದ್ದು. ಅಲ್ಲದೇ ಇದು ಕೋವಿಡ್ - 19 ಮಹಾಮಾರಿ ಹಿನ್ನೆಲೆಯಲ್ಲಿ ಸರ್ಕಾರದಿಂದ ಘೋಷಿಸಲಾದ ಲಾಕ್‌ಡೌನ್ ಮತ್ತು ಅದಕ್ಕೆ ಸಂಬಂಧಪಟ್ಟ ನಿರ್ಬಂಧಗಳ ಸಂಬಂಧದಲ್ಲಿ ಉಂಟಾದ ಅನಾನುಕೂಲತೆಗೆ ಮಾತ್ರ ಅನ್ವಯವಾಗುತ್ತದೆಯಲ್ಲದೇ ಬೇರೆ ಯಾವುದೇ ಕಾರಣದಿಂದ ಉಂಟಾದ ವಿಳಂಬಕ್ಕೆ ಅಥವಾ ವಿಫಲತೆಗೆ ಅನ್ವಯವಾಗುವುದಿಲ್ಲ.

d) ಮೇಲ್ಕಂಡ ವಿಸ್ತರಿಸಲಾದ ಅವಧಿಯು ಸದರಿ ಅವಧಿಯ ನಂತರ ಸ್ವಯಂ ಆಗಿ ಮುಕ್ತಾಯವಾಗುತ್ತದೆ.

(2) ಭದ್ರತಾ ಠೇವಣಿ ಹಿಂಪಾವತಿ :-

a) ಒಪ್ಪಂದದ ಅನುಸಾರ ಪಡೆಯಲಾಗಿರುವ ಭದ್ರತಾ ಠೇವಣಿಗಳನ್ನು ನಿಯಮಾನುಸಾರ ಆಯಾ ಒಪ್ಪಂದದಲ್ಲಿನ ಹೊಣೆಗಾರಿಕೆ ಮುಕ್ತಾಯವಾಗುವವರೆಗೆ ಗುತ್ತಿಗೆದಾರರಿಗೆ ಹಿಂದಿರುಗಿಸಲು ಅವಕಾಶವಿರುವುದಿಲ್ಲ. ಆದರೆ, ಕೋವಿಡ್-19 ಮಹಾಮಾರಿ ಕಾರಣದಿಂದ ಈ ಕೆಳಕಂಡ ಸಂದರ್ಭಗಳಲ್ಲಿ:-

(i)ಯಾವುದೇ ಗುತ್ತಿಗೆ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ವಿಫಲ (Default)ವಾಗಿರದ ಗುತ್ತಿಗೆದಾರರು ನಿಯಮಾನುಸಾರ ಅರ್ಜಿ ಸಲ್ಲಿಸಿದಲ್ಲಿ ; ಅಥವಾ

(ii) ಗುತ್ತಿಗೆದಾರರಿಂದ ಅವಧಿ ವಿಸ್ತರಣೆ / FORCE MAJEURE Clause ಅಡಿ ಮನವಿ ಸಲ್ಲಿಸಿ ಅ ಕುರಿತಾದ ಎಲ್ಲಾ ಅಗತ್ಯ ಪ್ರಕ್ರಿಯೆಯನ್ನು ಪೂರೈಸಿದಲ್ಲಿ.

ನಿಯಮಾನುಸಾರ ಅಗತ್ಯ ಪ್ರಕ್ರಿಯೆಯನ್ನು ಅನುಸರಿಸುವ ಷರತ್ತಿಗೆ ಒಳಪಟ್ಟು ಗುತ್ತಿಗೆದಾರರು ಒದಗಿಸಿದ ಒಟ್ಟು ಭದ್ರತಾ ಠೇವಣಿಯಲ್ಲಿ ಗುತ್ತಿಗೆದಾರರು / ರಿಯಾಯಿತಿದಾರರು / ಸರಬರಾಜುದಾರರು ನಿರ್ವಹಿಸಿದ ಕಾಮಗಾರಿ / ಸರಬರಾಜು ಪ್ರಮಾಣದ ಅನುಪಾತ (proportionate) ಕ್ಕೆ ಅನುಸಾರವಾಗಿ ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲು ಕ್ರಮವಹಿಸತಕ್ಕದ್ದು.

b) ಮೇಲ್ಕಂಡ ಭದ್ರತಾ ಠೇವಣಿ ಹಿಂಪಾವತಿ ಕ್ರಮವು ಸರ್ಕಾರದಿಂದ ಲಾಕ್‌ಡೌನ್ ಮತ್ತು ಅದಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಆದೇಶಗಳ ಹಿನ್ನೆಲೆಯಲ್ಲಿ ಸದರಿ ಅವಧಿಯಲ್ಲಿ ನಿರ್ವಹಿಸಲಾಗದ ಸಾಧನೆ (non performance) ಗೆ ಮಾತ್ರ ಅನ್ವಯವಾಗುತ್ತದೆ.

c) ಆದರೆ, ಗುತ್ತಿಗೆದಾರರು / ರಿಯಾಯಿತಿದಾರರು / ಸರಬರಾಜುದಾರರು ಒಪ್ಪಂದದ ಯಾವುದೇ ಅಂಶಗಳನ್ನು ಉಲ್ಲಂಘಿಸಿದಲ್ಲಿ ಅಂಥವರ ವಿರುದ್ಧ ಗುತ್ತಿಗೆ ಕರಾರಿನ ಅನ್ವಯ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಸಂಗ್ರಹಣಾ ಪ್ರಾಧಿಕಾರವು ಹೊಂದಿರುತ್ತದೆ.

ಆದಕ:ಮೇಲಿನಂತೆ

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:-

1. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಮಾಹಿತಿಗಾಗಿ
2. ವಿಶೇಷ ಆಯುಕ್ತರು ಮತ್ತು ವಲಯ ಉಸ್ತುವಾರಿ ಆಯುಕ್ತರು (ಯೋಜನೆ / ಹಣಕಾಸು ಮತ್ತು ಮಾಹಿತಿ ತಂತ್ರಜ್ಞಾನ / ಆಡಳಿತ / ಘನತ್ಯಾಜ್ಯ ಮತ್ತು ನಿರ್ವಹಣೆ / ಕಂದಾಯ) ರವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
3. ಪ್ರಧಾನ ಅಭಿಯಂತರರು ರವರಿಗೆ ಮಾಹಿತಿಗಾಗಿ
4. ವಲಯ ಆದರ / ಜಂಟಿ ಆಯುಕ್ತರು ರವರ ಮಾಹಿತಿಗಾಗಿ
5. ಮುಖ್ಯ ಆರ್ಥಿಕಾಧಿಕಾರಿ ಹಾಗೂ ಮುಖ್ಯ ಲೆಕ್ಕಾಧಿಕಾರಿ ರವರಿಗೆ ಮಾಹಿತಿಗಾಗಿ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: COVID-19 ಮಹಾಮಾರಿ ಹಿನ್ನೆಲೆಯಲ್ಲಿ ಸಿವಿಲ್ ಕಾಮಗಾರಿಗಳ ಅನುಷ್ಠಾನದಲ್ಲಿ ಸಡಿಲಿಕೆ ನೀಡುವ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 09 ಪಿಸಿಎಲ್ 2004(I) ದಿನಾಂಕ: 06-08-2005.

2. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 09 ಪಿಸಿಎಲ್ 2004(II) ದಿನಾಂಕ: 06-08-2005.

3. ಸಿವಿಲ್ ಗುತ್ತಿಗೆದಾರರ ಮನವಿಗಳು.

ಪ್ರಸ್ತಾವನೆ:

ಮೇಲೆ ಓದಲಾದ ಸರ್ಕಾರದ ಆದೇಶ (1) ಮತ್ತು (2)ರಲ್ಲಿರುವ ಅನುಬಂಧಗಳ ಮಾದರಿ ಟೆಂಡರ್ ದಾಖಲೆಗಳನ್ನು ರಾಜ್ಯದಲ್ಲಿನ ಎಲ್ಲಾ ಸರಕುಗಳು ಮತ್ತು ಸಿವಿಲ್ ಕಾಮಗಾರಿಗಳ ಸಂಗ್ರಹಣೆಯಲ್ಲಿ ಸಂಗ್ರಹಣಾ ಪ್ರಾಧಿಕಾರಗಳು ಬಳಕೆ ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ. ಪ್ರಸ್ತುತ ಹಲವಾರು ಸಿವಿಲ್ ಗುತ್ತಿಗೆದಾರರಿಂದ ಹಾಗೂ ಗುತ್ತಿಗೆದಾರರ ಸಂಘ/ಸಂಸ್ಥೆಗಳಿಂದ COVID-19 ಮಹಾಮಾರಿಯ ಹಿನ್ನೆಲೆಯಲ್ಲಿ ಮಾಡಲಾದ ಲಾಕ್‌ಡೌನ್ ಮತ್ತು ನಂತರ ಉದ್ಭವಿಸಿದ ಕಾರಣಗಳಿಂದ ಸರಕುಗಳು ಮತ್ತು ಸೇವೆಗಳ ಸರಬರಾಜು ವ್ಯವಸ್ಥೆಯಲ್ಲಿ ತೊಂದರೆಯಾದ ಹಿನ್ನೆಲೆಯಲ್ಲಿ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿ ಮತ್ತು ಸಾಮಗ್ರಿಗಳ ಸರಬರಾಜಿನಲ್ಲಿ ವಿಳಂಬವಾಗಿರುವ ಅವಧಿಯನ್ನು FORCE MAJEURE ಆಗಿ ಪರಿಗಣಿಸುವುದನ್ನು ಸೇರಿದಂತೆ ಹಲವು ಸಡಿಲಿಕೆಗಳನ್ನು ನೀಡುವಂತೆ ಕೋರಲಾಗಿರುತ್ತದೆ. ಸದರಿ ಮನವಿಗಳನ್ನು ಮತ್ತು ಭಾರತ ಸರ್ಕಾರದಿಂದ ಈ ಕುರಿತು ನೀಡಲಾದ ಸಡಿಲಿಕೆ/ರಿಯಾಯಿತಿಗಳನ್ನು ಪರಿಶೀಲಿಸಿ ಹಾಗೂ ಈ ಸಂಬಂಧ ನಿರ್ದಿಷ್ಟ ಪಡಿಸಲಾಗಿರುವ ಮಾದರಿ ಟೆಂಡರ್ ದಾಖಲೆಗಳಲ್ಲಿ ಅವಕಾಶ ಕಲ್ಪಿಸಲು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಇ 360 ವೆಚ್ಚ-12/2020 (ಇ-ಆಫೀಸ್) ಬೆಂಗಳೂರು, ದಿನಾಂಕ: 13-07-2020

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ. COVID-19 ಮಹಾಮಾರಿಯ ಪರಿಣಾಮದಿಂದಾಗಿ ಸರಕು ಸರಬರಾಜು ಮತ್ತು ಸಿವಿಲ್ ಕಾಮಗಾರಿಗಳ ಗುತ್ತಿಗೆಗಳ ಸಂಬಂಧದಲ್ಲಿ ಈ ಕೆಳಗಿನಂತೆ ನಿರ್ದಿಷ್ಟ ಅವಧಿಗೆ ತಾತ್ಕಾಲಿಕವಾಗಿ ಗುತ್ತಿಗೆ ಒಪ್ಪಂದದಲ್ಲಿ ಬದಲಾವಣೆಗಳನ್ನು ಅಳವಡಿಸಿಕೊಳ್ಳಲು ಆದೇಶಿಸಿದೆ.

Scanned with CamScanner

ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 459 ವೆಚ್ಚ-12/2020
(ಇ-ಆಫೀಸ್ ಕಡತ)

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:10.08.2020

ಇಂದ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಆರ್ಥಿಕ ಇಲಾಖೆ, ವಿಧಾನಸೌಧ,
ಬೆಂಗಳೂರು-560001.

ಇವರಿಗೆ:
ಕರ್ನಾಟಕ ಸ್ಟೇಟ್ ಕಂಟ್ರಾಕ್ಟರ್ಸ್ ಅಸೋಸಿಯೇಷನ್,
ನಂ.166, 5ನೇ ಮುಖ್ಯ ರಸ್ತೆ,
ಚಾಮರಾಜಪೇಟೆ,
ಬೆಂಗಳೂರು-560 018

ಮಾನ್ಯರೇ,

ವಿಷಯ : Performance Security ಅನ್ನು ಮರುಪಾವತಿಸುವ ಕುರಿತು..
ಉಲ್ಲೇಖ : ತಮ್ಮ, ದಿನಾಂಕ:09.07.2020.

.....

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೋರಿರುವಂತೆ ಸರ್ಕಾರಿ ಆದೇಶ ಸಂ:ಆಇ 360 ವೆಚ್ಚ-12/2020 (ಇ-ಆಫೀಸ್), ದಿನಾಂಕ:13.07.2020ರನ್ನು ಹೊರಡಿಸಲಾಗಿದ್ದು, ಸದರಿ ಸರ್ಕಾರಿ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ತಮಗೆ ಕಳುಹಿಸಲು ನಿರ್ದೇಶಿತಳಾಗಿದ್ದೇನೆ.

(ಸರ್ಕಾರದ ಕಾರ್ಯದರ್ಶಿಗಳು (ವೆಚ್ಚ),
ಆರ್ಥಿಕ ಇಲಾಖೆ, ಇವರಿಂದ ಅನುಮೋದಿತ)

ತಮ್ಮ ವಿಶ್ವಾಸಿ,

(ಕೆ.ಗಾಯಿತ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ)(ಪ್ರ)

ಅವಕಾಶವಿರುವುದಿಲ್ಲ. ಆದರೆ, COVID-19 ಮಹಾಮಾರಿ ಕಾರಣದಿಂದ ಈ ಕೆಳಕಂಡ ಸಂದರ್ಭಗಳಲ್ಲಿ-

(i) ಯಾವುದೇ ಗುತ್ತಿಗೆ ಹೊಣೆಗಾರಿಕೆಯನ್ನು ನಿರ್ವಹಿಸುವಲ್ಲಿ ವಿಫಲ (Default)ವಾಗಿರದ ಗುತ್ತಿಗೆದಾರರು ನಿಯಮಾನುಸಾರ ಅರ್ಜಿ ಸಲ್ಲಿಸಿದಲ್ಲಿ; ಅಥವಾ

(ii) ಗುತ್ತಿಗೆದಾರರಿಂದ ಅವಧಿ ವಿಸ್ತರಣೆ/ FORCE MAJEURE Clause ಅಡಿ ಮನವಿ ಸಲ್ಲಿಸಿ, ಆ ಕುರಿತಾದ ಎಲ್ಲಾ ಅಗತ್ಯ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದಲ್ಲಿ.

ನಿಯಮಾನುಸಾರ ಅಗತ್ಯ ಪ್ರಕ್ರಿಯೆಯನ್ನು ಅನುಸರಿಸುವ ಪರತ್ತಿಗೆ ಒಳಪಟ್ಟು ಗುತ್ತಿಗೆದಾರರು ಒದಗಿಸಿದ ಒಟ್ಟು ಭದ್ರತಾ ಠೇವಣಿಯಲ್ಲಿ ಗುತ್ತಿಗೆದಾರರು / ರಿಯಾಯಿತಿದಾರರು / ಸರಬರಾಜುದಾರರು ನಿರ್ವಹಿಸಿದ ಕಾಮಗಾರಿ/ಸರಬರಾಜು ಪ್ರಮಾಣದ ಅನುಪಾತ(proportionate)ಕ್ಕೆ ಅನುಸಾರವಾಗಿ ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲು ಕ್ರಮವಹಿಸತಕ್ಕದ್ದು.

b) ಮೇಲ್ಕಂಡ ಭದ್ರತಾ ಠೇವಣಿ ಹಿಂಪಾವತಿ ಕ್ರಮವು ಸರ್ಕಾರದಿಂದ ಲಾಕ್‌ಡೌನ್ ಮತ್ತು ಅದಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಆದೇಶಗಳ ಹಿನ್ನೆಲೆಯಲ್ಲಿ ಸದರಿ ಅವಧಿಯಲ್ಲಿ ನಿರ್ವಹಿಸಲಾಗದ ಸಾಧನೆ(non performance)ಗೆ ಮಾತ್ರ ಅನ್ವಯವಾಗುತ್ತದೆ.

c) ಆದರೆ, ಗುತ್ತಿಗೆದಾರರು/ರಿಯಾಯಿತಿದಾರರು/ಸರಬರಾಜುದಾರರು ಒಪ್ಪಂದದ ಯಾವುದೇ ಅಂಶಗಳನ್ನು ಉಲ್ಲಂಘಿಸಿದಲ್ಲಿ, ಅಂಥವರ ವಿರುದ್ಧ ಗುತ್ತಿಗೆ ಕರಾರಿನ ಅನ್ವಯ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಸಂಗ್ರಹಣಾ ಪ್ರಾಧಿಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಐ.ಎಸ್.ಎನ್.ಪ್ರಸಾದ್)
ಸರ್ಕಾರದ ಅವರ ಮುಖ್ಯ ಕಾರ್ಯದರ್ಶಿ
ಆರ್ಥಿಕ ಇಲಾಖೆ

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು

ಪ್ರತಿ:

1. ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಕಾರ್ಯದರ್ಶಿಗಳು
3. ಮಹಾಲೇಖಾಪಾಲರು (ಎಃಇ), ಕರ್ನಾಟಕ ಸರ್ಕಾರ, ಬೆಂಗಳೂರು
4. ಕಾರ್ಯದರ್ಶಿಗಳು, ಕರ್ನಾಟಕ ವಿಧಾನ ಸಭೆ ಹಾಗೂ ಕರ್ನಾಟಕ ವಿಧಾನ ಪರಿಷತ್ತು
5. ರಿಜಿಸ್ಟ್ರಾರ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
6. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು
7. ಕಾರ್ಯದರ್ಶಿಗಳು, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು
8. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
9. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಣಾಧಿಕಾರಿಗಳು, ಜಿಲ್ಲಾ ಪಂಚಾಯತ್
10. ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರು
11. ರಾಜ್ಯದ ಎಲ್ಲಾ ನಿಗಮ ಮತ್ತು ಮಂಡಳಿಗಳ ಕಾರ್ಯನಿರ್ವಾಣಾಧಿಕಾರಿಗಳು
12. ಆಂತರಿಕ ಆರ್ಥಿಕ ಸಲಹೆಗಾರರು
13. ಸರ್ಕಾರದ ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು / ವಿಶೇಷಾಧಿಕಾರಿಗಳು / ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ
14. ಶಾಖೆಯ ರಕ್ಷ ಕಡತ / ಹೆಬ್ಬುವರಿ ಪ್ರತಿ.